ಸಾಕ್ಷಿಯನ್ನು ದಿಃ **25.06.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಬಿ.ಎಂ. ವಕೀಲರಿಂದಃ-

ಪಿತ್ರಾರ್ಜಿತ ಆಸ್ತಿ ಎಂದರೆ ತಂದೆಯವರ ಆಸ್ತಿ ಎಂದು ತಿಳಿದುಕೊಂಡಿದ್ದೇನೆ. ನನ್ನ ತಂದೆಗೆ 7 ಎಕರೆ ಆಸ್ತಿ ಇತ್ತು. ನನ್ನ ತಂದೆಗೆ ನನ್ನ ತಾತನಿಂದ ಆಸ್ತಿ ಬಂತು. ತಾತನಿಂದ ಆಸ್ತಿ ಬಂತು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ಏನು ದಾಖಲೆ ಕೊಟ್ಟಿದ್ದೀರಿ ಎಂದರೆ ನನಗೆ ಗೊತ್ತಾಗುವುದಿಲ್ಲ. ನ್ಯಾಯಲಾಯಕ್ಕೆ ನನ್ನ ಮಕ್ಕಳು ದಾಖಲೆ ಕೊಟ್ಟಿದ್ದಾರೆ. ಏನೇನು ದಾಖಲೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಉದ್ದೂರು ಗ್ರಾಮದಲ್ಲಿ 3 ಎಕರೆ ಇದೆ. ಸರ್ವೇ ನಂ.ಗೊತ್ತಿಲ್ಲ. ಉದ್ದೂರು ಗ್ರಾಮದ ಆಸ್ತಿಯನ್ನು ನನ್ನ ತಂದೆ ಸಂಪಾದನೆ ಮಾಡಿದ್ದಾರೆ. ದಾವಾ ಷೆಡ್ಯೂಲ್ 1 ನೇ ಆಸ್ತಿಯನ್ನು 1981 ರಲ್ಲಿ ನನ್ನ ತಂದೆ ಕ್ರಯಕ್ಕೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುರೆದು ಅದನ್ನು ನನ್ನ ತಂದೆ ತಾತನಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ನನ್ನ ತಮ್ಮ. ದಾವಾ ಷೆಡ್ಯೂಲ್ 1 ನೇ ಆಸ್ತಿಯನ್ನು 2021 ರಲ್ಲಿ ನನ್ನ ತಂದೆ 2 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಮಾಡಿಕೊಟ್ಟರು ಎಂದರೆ ನನಗೆ ಗೊತ್ತಿಲ್ಲದಂತೆ ಮಾಡಿದ್ದಾರೆ. ಅದನ್ನು ಮಾಡಿರುವುದು ನನಗೆ ಗೊತ್ತಿಲ್ಲ. ಆ ದಾಖಲೆ ಆದ ನಂತರ ನಾನು ಈ ದಾವೆ ಸಲ್ಲಿಸಿದ್ದೇನೆ.

ದಾವಾ ಷೆಡ್ಯೂಲ್ 2 ನೇ ಆಸ್ತಿಯು ನನ್ನ ತಂದೆಗೆ ಸರ್ಕಾರದ ಮಂಜೂರಿ ಮೂಲಕ ಕಿಮ್ಮತ್ತು ಪಾವತಿಸಿ ಬಂದಿದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಸರ್ಕಾರದಿಂದ ನಾನೂ ಕೂಡ ಸಂಪಾದನೆ ಮಾಡಿದ್ದೇನೆ. ಆಗ ನಾವು ಚಿಕ್ಕಮಕ್ಕಳು. ದಾವಾ ಷೆಡ್ಯೂಲ್ 3 ನೇ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ನನ್ನ ತಾಯಿಗೆ ಎಷ್ಟನೇ ಇಸವಿಯಲ್ಲಿ ಬಂತು ಎಂದು ನನಗೆ ಗೊತ್ತಿಲ್ಲ. ದಿನಾಂಕ 24.02.1995 ರಂದು 1 ನೇ ಪ್ರತಿವಾದಿ ಸರ್ಕಾರಕ್ಕೆ ಕಿಮ್ಮತ್ತು ಕಟ್ಟಿ ದಾವಾ ಷೆಡ್ಯೂಲ್ 3 ನೇ ಆಸ್ತಿಯನ್ನು ಮಂಜೂರಿ ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆಯಿಂದ ನಾನು ಆಸ್ತಿ ಬರೆಸಿಕೊಂಡಿಲ್ಲ. ದಿನಾಂಕ 24.05.2019 ರಂದು ನನ್ನ ಹೆಳರಿಗೆ ದಾನಪತ್ರ ಬರೆಸಿಕೊಂಡಿದ್ದೇನೆ ಎಂದರೆ ಅದಕ್ಕಾಗಿ ಹಣ ಕೊಟ್ಟಿದ್ದೇನೆ. ಎಷ್ಟು ಹಣ ಕೊಟ್ಟಿದ್ದೇನೆ

ಎಂದು ದಾನಪತ್ರದಲ್ಲಿ ಬರೆದಿಲ್ಲ. 4 ನೇ ಪ್ರತಿವಾದಿ ನನ್ನ ತಂಗಿ. ಅವರಿಗೂ ಕೂಡ ನನ್ನ ತಂದೆ ದಾನಪತ್ರ ಮಾಡಿ ಕೊಟ್ಟಿದ್ದಾರೆ ಎಂದರೆ ಟ್ರ್ಯಾಕ್ಟರ ತೆಗೆದುಕೊಂಡು ಹೋಗಿದ್ದರು. ದಾನಪತ್ರಕ್ಕೆ ಹಣ ಕೊಟ್ಟಿದ್ದಾರೆ. ಮೇಲೆ ಹೇಳಿದ ದಾನಪತ್ರಗಳ ಬಗ್ಗೆ ವಕೀಲರಿಗೆ ಹೇಳಿಲ್ಲ ಮತ್ತು ವಾದಪತ್ರದಲ್ಲಿ ಬರೆಸಿಲ್ಲ. ದಾನಪತ್ರ ಆಗಿದೆ ಎಂದು ವಕೀಲರಿಗೆ ಹೇಳಲು ತೊಂದರೆ ಇರಲಿಲ್ಲ ಎಂದರೆ ಕೊನೆಗೆ ದಾಖಲೆ ಕೊಟ್ಟಿದ್ದೇನೆ. ದಾನಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 3 ನೇ ಆಸ್ತಿ ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 1 ಮತ್ತು 2 ನೇ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಿಸ್ಸೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಮತ್ತು ಅಕ್ರಮ ಲಾಭ ಪಡೆಯಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ರಿಂದ 5 ನೇ ಪ್ರತಿವಾದಿಗಳ ಪರ -</u>

ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.